# ಹೊಸತು




## ಪಾಂಡ್ಸ್ ವೈಟ್ ಬ್ಯೂಟಿ

ತ್ವಚೆಯ ಬಗ್ಗೆ ಕಾಳಜಿ ವಹಿಸುವ ಮಹಿಳೆಯರಿಗಾಗಿ ಪಾಂಡ್ಸ್ ವೈಟ್ ಬ್ಯೂಟಿ ಫೇರ್‌ನೆಸ್ಸ್ ಕ್ರೀಮ್ ಪರಿಚಯಿಸಿದೆ.

ಇದು ಮುಖದ ಚರ್ಮವನ್ನು ಹೊಳೆಯುವಂತೆ ಮಾಡಿ, ಕಪ್ಪು ಕಲೆಯನ್ನು ಹೋಗಲಾಡಿಸುತ್ತದೆ ಎಂದು ಕಂಪೆನಿ ಹೇಳಿದೆ.

ಆರೋಗ್ಯವಂತ ಮತ್ತು ಕಾಂತಿಯುಕ್ತ ಚರ್ಮಕ್ಕಾಗಿ ಇದನ್ನು ಬಳಸಿದರೆ ತ್ವರಿತ ಪರಿಣಾಮವಾಗುತ್ತದೆ ಎಂಬುದು ಪಾಂಡ್ಸ್ ಹೇಳಿಕೆ.

ಬೆಲೆ 20 ಗ್ರಾಂ ಪ್ಯಾಕ್‌ಗೆ 55 ರೂಪಾಯಿ. ಮಾಹಿತಿಗೆ : 08879526588

## ಫೆರೆರೊ ರೋಶರ್ ಚಾಕೊಲೇಟ್




ಹೊಸ ವರ್ಷದ ಸಂಭ್ರಮವನ್ನು ಚಾಕೊಲೇಟ್‌ನೊಂದಿಗೆ ಆಚರಿಸಲು ಫೆರೆರೊ ಸಿಹಿಯಾದ ರೋಶರ್ ಚಾಕೊಲೇಟ್‌ನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಆಕರ್ಷಕ ಉಡುಗೊರೆ ಪ್ಯಾಕ್‌ಗಳಲ್ಲಿ ಇವು ಲಭ್ಯವಿದ್ದು, ಗೆಳೆಯರಿಗೆ, ಕುಟುಂಬಿಕರೊಂದಿಗೆ ಹಂಚಿಕೊಳ್ಳಲು ಸೂಕ್ತವಾಗಿದೆ. ಹಲವು ವಿಧದ ಪ್ಯಾಕ್‌ಗಳ ಆಯ್ಕೆ ಇದ್ದು, ಇಟಾಲಿಯನ್ ರುಚಿಯ ಚಾಕೊಲೇಟ್ ಇದಾಗಿದೆ. ಮಕ್ಕಳಿಂದ ಹಿಡಿದು ಹಿರಿಯರವರೆಗೆ ಎಲ್ಲರಿಗೂ ಇಷ್ಟವಾಗುತ್ತದೆ ಎಂದು ಕಂಪೆನಿ ಹೇಳಿದೆ. ವಿವರಗಳಿಗೆ: www.ferreroindia.com

## ಉಷಾ ವಾಟರ್ ಹೀಟರ್

ಉಷಾ ಇಂಟರ್‌ನ್ಯಾಷನಲ್‌ನಿಂದ ಅಕ್ವಾಜೆನಿ ಎಂಬ ವಾಟರ್ ಹೀಟರ್ ಹೊಸದಾಗಿ ಮಾರುಕಟ್ಟೆಗೆ ಬಂದಿದೆ. 35 ಲೀ. ಮತ್ತು 50 ಲೀಟರ್ ಸಾಮರ್ಥ್ಯದ ಟ್ಯಾಂಕ್ ಆಯ್ಕೆಯ ಜೊತೆಗೆ ಹಲವು ಆಕರ್ಷಕ ಬಣ್ಣದ ವಿನ್ಯಾಸ ಕೂಡ ಇದಕ್ಕಿದೆ.

ವಾಟರ್ ಟ್ಯಾಂಕ್ ಮೇಲೆ 5 ವರ್ಷ ವಾರಂಟಿ ಇದ್ದು, ಉತ್ತಮ ಗುಣಮಟ್ಟದ ಹೀಟರ್ ಎಂದು ಕಂಪೆನಿ ಹೇಳಿದೆ. ಬೆಲೆ 7,990 ರೂಪಾಯಿ. ವಿವರಗಳಿಗೆ: www.ushainternational.com




## ಟೈಟಾನ್ ರಾಗ




ಪ್ರಮುಖ ವಾಚ್ ತಯಾರಕ ಸಂಸ್ಥೆ ಟೈಟಾನ್, ತನ್ನ ರಾಗ ವಾಚ್ ಸರಣಿಯಲ್ಲಿ ಹೊಸ ಸಂಗ್ರಹವನ್ನು ಬಿಡುಗಡೆ ಮಾಡಿದೆ.

ಮದುವೆ, ಪಾರ್ಟಿ ಸೇರಿದಂತೆ ಯಾವುದೇ ರೀತಿಯ ಸಮಾರಂಭಗಳಿಗೆ ಧರಿಸಬಹುದಾದ ವಾಚ್ ಇದಾಗಿದ್ದು, ಆಕರ್ಷಕ ವಿನ್ಯಾಸ ಹೊಂದಿದೆ.

ವಧೂ–ವರರ ಪ್ರತ್ಯೇಕ ಜೋಡಿ ಕಲೆಕ್ಷನ್ ಇದರ ವಿಶೇಷತೆಯಾಗಿದ್ದು, ಉಡುಗೊರೆ ಕೊಡಲು ಸೂಕ್ತ ಎಂದು ಕಂಪೆನಿ ಹೇಳಿದೆ. ಸಿಂಪಲ್ ಮತ್ತು ಟ್ರೆಡಿಷನಲ್ ಎಂಬ ಎರಡು ಆಯ್ಕೆಗಳಿವೆ.

ಬೆಲೆ 1595 ರೂಪಾಯಿಗಳಿಂದ ಆರಂಭ. ವಿವರಗಳಿಗೆ: www.titanworld.co.in

## ವೈವೊ ಸ್ಮಾರ್ಟ್‌ಫೋನ್

ಸ್ಮಾರ್ಟ್‌ಫೋನ್ ತಯಾರಕ ಸಂಸ್ಥೆ ವೈವೊ ಇದೀಗ X5Max ಎಂಬ ಅತೀ ತೆಳುವಾದ ಸ್ಮಾರ್ಟ್‌ಫೋನ್ ಬಿಡುಗಡೆಗೊಳಿಸಿದೆ. 5.5 ಇಂಚಿನ ಸ್ಪರ್ಶ ಸಂವೇದಿ ತೆರೆ, 5 ಮೆಗಾಪಿಕ್ಸೆಲ್ ಸೆಲ್ಫಿ ಮತ್ತು 13 ಮೆಗಾಪಿಕ್ಸೆಲ್ ಕ್ಯಾಮೆರಾ, 2 ಜಿಬಿ ರ‍್ಯಾಮ್ ಇದರಲ್ಲಿದೆ. 16 ಜಿಬಿ ಮೆಮೊರಿ, 2000 ಎಂಎಎಚ್ ಬ್ಯಾಟರಿ ಸಾಮರ್ಥ್ಯವಿದೆ.




ಬೆಲೆ 32,980 ರೂಪಾಯಿ.

ವಿವರಗಳಿಗೆ: www.vivoglobal.in

## ನೋಕಿಯ ಲೂಮಿಯ 638




ಲೂಮಿಯ ವಿಂಡೋಸ್ ಫೋನ್ ಸರಣಿಯಲ್ಲಿ ನೋಕಿಯ 638 ಎಂಬ ಸ್ಮಾರ್ಟ್‌ಫೋನ್ ಹೊರತಂದಿದೆ. 4.5 ಇಂಚಿನ ಸ್ಪರ್ಶ ಸಂವೇದಿ ತೆರೆ, 5 ಮೆಗಾಪಿಕ್ಸೆಲ್ ಕ್ಯಾಮೆರಾ, 8 ಜಿಬಿ ಮೆಮೊರಿ ಸಾಮರ್ಥ್ಯ ಇದರಲ್ಲಿದೆ. ವಿಂಡೋಸ್ ಫೋನ್ 8.1 ಓಎಸ್ ಮತ್ತು 1 ಜಿಬಿ ರ‍್ಯಾಮ್ ಇದ್ದು, 1830 ಎಂಎಎಚ್ ಬ್ಯಾಟರಿ ಹೊಂದಿದೆ. 4G ನೆಟ್‌ವರ್ಕ್ ಇದರ ವಿಶೇಷ. ಬೆಲೆ: 8,299 ರೂಪಾಯಿ. ವಿವರಗಳಿಗೆ: www.microsoft.com